Registration of Documents

*Q.—497. Sri C. S. HULKOTI (Mundargi).—

Will the Minister for Revenue be pleased to state :—

(*a*) whether they are aware that there has been inordinate delay in the registration of documents and in returning the registered documents to the parties and also in the supply of certified copies of registered documents since the stoppage of Photozinc system in the District of Dharwar ;

(*b*) the number of Sub-Registrar's Offices in the said District ;

(*c*) the steps they have taken to minimise the delay in the return of the documents and in the supply of registered copies ;

(*d*) whether the Government has taken steps to revive the photo-zinc system again in that area to avoid the inconvenience caused to the parties concerned ?

A.—Sri M. V. KRISHNAPPA (Minister for Revenue).—

(*a*) Yes. But certified copies are being is used within time.
(*b*) 15.
(*c*) The strength of clerical staff has been augmented.
(*d*) Yes.

ಶ್ರೀ ಸಿ. ಎಸ್. ಹುಲ್ಕೋಟಿ.—ಈ ಡೀಡ್ಸ್ ರಿಜಿಸ್ಟರ್ ಆಗಿ ಬರಲಿಕ್ಕೆ ಎಷ್ಟು ತಿಂಗಳು ಬೇಕಾಗುತ್ತದೆ ?

† ಶ್ರೀ ಎಂ. ವಿ. ಕೃಷ್ಣಪ್ಪ.—ಅಷ್ಟು ತಿಂಗಳು ಏನೂ ಬೇಕಾಗಿಲ್ಲ, 10-15 ದಿವಸದಲ್ಲಿ ಆಗಬೇಕು. ತಮಗೆ ಉತ್ತರ ಕೊಟ್ಟಿದ್ದೇನೆ. ಈಗ ಮತ್ತೆ ಅದೇ ಹೇಳುತ್ತೇನೆ. ಉತ್ತರ ಕರ್ನಾಟಕದ ಕೆಲವು ಜಿಲ್ಲೆಗಳಲ್ಲಿ ನಮಗೆ ಫೋಟೋ ಜಿಂಕ್ ರಿಜಿಸ್ಟ್ರೇಷನ್‌ಗೆ ಮೊದಲು ಅವಕಾಶ ಇತ್ತು. ಪೂನಾದಲ್ಲಿ ಬೊಂಬಾಯಿ ಸರ್ಕಾರದವರು ಅವಕಾಶ ಕೊಟ್ಟಿದ್ದರು, ಫೋಟೋ ಜಿಂಕ್ ರಿಜಿಸ್ಟ್ರೇಷನ್ ಮುಖಾಂತರ ಬಹಳ ಬೇಗ ಕಾಪಿ ಆಗುತ್ತಾ ಇತ್ತು. 7-8 ವರ್ಷಾದಮೇಲೆ ಒಪ್ಪಂದದ ಪ್ರಕಾರ ಅದನ್ನು ಅವರು ನಿಲ್ಲಿಸಿದರು ಆದ್ದರಿಂದ ಸ್ವಲ್ಪ ನಿಧಾನವಾಗಿದೆ. ಕೆಲಸ ಅಕ್ಯುಮುಲೇಟ್ ಆಗಿದೆ. ಬೆಂಗಳೂರಿನಲ್ಲಿ ಫೋಟೋ ರಿಜಿಸ್ಟ್ರೇಷನ್‌ಗಾಗಿ ನಾಲ್ಕೂವರೆ ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದ್ದೇವೆ. ಸುಮಾರು ಒಂದು ಲಕ್ಷ 20 ಸಾವಿರ ರೂಪಾಯಿ ಗಳನ್ನು ಖರ್ಚು ಮಾಡಿದ್ದೇವೆ, ಅದು ಇಷ್ಟರಲ್ಲೇ ಆಗಬಹುದು, ಅದಮೇಲೆ ಬಹಳ ಬೇಗ ರಿಜಿಸ್ಟರ್ಡ್ ಕಾಪಿ ಮಾಡಿಕೊಡುತ್ತಾರೆ, ಈಗ ಸ್ವಲ್ಪ ನಿಧಾನವಾಗಿದೆ ಒಪ್ಪಿಕೊಳ್ಳುತ್ತೇನೆ.

Sri C. S. HULKOTI.—How many months are required to get a deed registered ?

ಶ್ರೀ ಎಂ. ವಿ. ಕೃಷ್ಣಪ್ಪ.—ಬೇಗ ರಿಜಿಸ್ಟ್ರೇಷನ್ ಆಗಿ ಹೋಗುತ್ತದೆ, ಆದರೆ ರಿಜಿಸ್ಟರ್ಡ್ ಕಾಪಿ ತಮಗೆ ತಲುಪಿಸಬೇಕಾದರೆ ಟೈಂ ಆಗುತ್ತಾ ಇದೆ, ಅದನ್ನು ಕಾಪಿ ಮಾಡಿಕೊಡಬೇಕಾದರೆ ನಿಧಾನ ವಾಗಿದೆ, ಬಹುಶಃ ಕೆಲವು ಸಂದರ್ಭಗಳಲ್ಲಿ ತಿಂಗಳುಗಳಾಗಿರಬಹುದು.

ಶ್ರೀ ಸಿ. ಎಸ್. ಹುಲ್ಕೋಟಿ.—ಗದಗ್ ತಾಲ್ಲೂಕಿನಲ್ಲಿ 7-8 ತಿಂಗಳು ನಿಧಾನವಾಗಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಸಾಧಾರಣವಾಗಿ 6 ದಿವಸ 10 ದಿವಸದಲ್ಲಿ ಕೊಡುತ್ತಾರೆ. ನಿಮ್ಮ ತಾಲ್ಲೂಕಿನಲ್ಲಿ ನಿಧಾನವಾಗಿದೆ, 2-3 ತಿಂಗಳು ಆಗುತ್ತಾ ಇದೆ ಎಂದು ದೂರು ಬಂದಿದೆ.

ಶ್ರೀ ಸಿ. ಎಸ್. ಹುಲ್ಕೋಟಿ.—ಆ ರೀತಿ ಆಗುತ್ತಾ ಇರುವುದಕ್ಕೆ ಸಾಕಾದಷ್ಟು ಸಿಬ್ಬಂದಿ ಇಲ್ಲ ಎಂಬುದು ಒಂದು ಕಾರಣವಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಈಗ ಸಾಕಾದಷ್ಟು ಸಿಬ್ಬಂದಿ ಕೊಟ್ಟಿದ್ದೇವೆ. ಅದಷ್ಟು ಬೇಗ ಕ್ಲಿಯರ್ ಮಾಡಿ ಎಂದು ಬರೆಯುತ್ತಾ ಇದ್ದೇವೆ.

ಶ್ರೀ ಸಿ. ಎಸ್. ಹುಲ್ಕೋಟಿ.—ಗದಗ್ ಮತ್ತು ಹುಬ್ಬಳ್ಳಿಯಲ್ಲಿ 8-10 ತಿಂಗಳಿನಿಂದ ಕಾಗದ ರಿಜಿಸ್ಟರ್ ಆಗದೆ ಹಾಗೆಯೇ ನಿಂತುಹೋಗಿದೆ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ತಾವು ಹೇಳುತ್ತಾ ಇದ್ದೀರಿ ಅದಕ್ಕಿಂತಲೂ ಏನು ಬೇಕು !

ಶ್ರೀ ಎಸ್. ಎಂ. ಗುರಡ್ಡಿ.—ಸ್ಯಾಂಪ್ ಕೊರತೆಯಿಂದಾಗಿ ಧಾರವಾಡ, ಬಿಜಾಪುರ ಮತ್ತು ಬೆಳಗಾಂ ಜಿಲ್ಲೆಗಳಲ್ಲಿ ರಿಜಿಸ್ಟ್ರೇಷನ್ ಕೆಲಸ ಬಹಳ ನಿಧಾನವಾಗುತ್ತಾ ಇದೆ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ? ಸ್ಟ್ಯಾಂಪ್ ದೊರಕಿಸಲಿಕ್ಕೆ ತಾವು ಕೈಕೊಂಡ ಕ್ರಮ ಏನು ?

ಶ್ರೀ ಎಂ. ವಿ. ಕೃಷ್ಣಪ್ಪ.—ಕೆಲವು ದಿವಸ ಫಾರಿನ್‌ನಿಂದ ಬರಬೇಕಾದ ಪೇಪರ್ ಬರದೆ ಸ್ಟ್ಯಾಂಪ್ ಪೇಪರ್‌ಗೆ ತೊಂದರೆಯಾಗಿತ್ತು ; ಆಗ ಎಲ್ಲಾ ಕಡೆಯಲ್ಲೂ ಸ್ಟ್ಯಾಂಪ್ ಷಾರ್ಟೇಜ್ ಇತ್ತು. ಈಗ ಅಂತಹ ತೊಂದರೆಯೇನೂ ಇಲ್ಲ, ರಿಜಿಸ್ಟ್ರೇಷನ್ ಆಗಲಿಕ್ಕೆ ತಡವಾಗುತ್ತಾ ಇಲ್ಲ. ಆ ಪ್ರಾಂತ್ಯದಲ್ಲಿ ಸಿಬ್ಬಂದಿ ಇಲ್ಲದೆ ಕೆಲಸ ಅಕ್ಯೂಮುಲೇಷನ್ ಆಗಿತ್ತು, ಅದನ್ನು ಕ್ಲಿಯರ್ ಮಾಡುವುದಕ್ಕೆ ಏರ್ಪಾಡು ಮಾಡುತ್ತಾ ಇದ್ದೇವೆ.

ಶ್ರೀ ಟಿ. ಕೆ. ಕಂಬಳಿ.—ನಮ್ಮ ಜಿಲ್ಲೆಯಲ್ಲಿ 15 ದಿವಸದೊಳಗೆ ಆಗುತ್ತದೆ ಎಂದು ಹೇಳಿದಿರಿ, ಕುಂದಗೋಳದಲ್ಲಿ ಬಹಳ ತಡವಾಗುತ್ತಾ ಇದೆ, ರಿಜಿಸ್ಟ್ರೇಷನ್ ಆದಮೇಲೆ ಇಂತಿಷ್ಟೇ ದಿವಸದೊಳಗೆ ಕಾಪಿ ಕೊಡಬೇಕೆಂದು ಕಡ್ಡಾಯಮಾಡತಕ್ಕಂತಹ ಒಂದು ಆರ್ಡರ್ ಹೊರಡಿಸುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಈಗ ಬಾಕಿ ಇರುವ ಕೆಲಸ ಆಗಿ ಹೋದಮೇಲೆ ಅಂತಹ ಕಾನೂನು ಮಾಡಬಹುದು, ಈಗ ಮಾಡುವುದಕ್ಕೆ ಹೋದರೆ ಕಾರ್ಯತಃ ನಡೆಯುವುದಿಲ್ಲ.

ಶ್ರೀ ಸಿದ್ದಯ್ಯ ಕಾಶೀಮಠ.—ಧಾರವಾಡ ಜಿಲ್ಲೆಯಲ್ಲಿ 15 ಸಬ್ ರಿಜಿಸ್ಟ್ರಾರ್ ಆಫೀಸುಗಳು ಇವೆ ಎಂದು ಹೇಳಿದ್ದೀರಿ. ಅಲ್ಲಿ ರಿಜಿಸ್ಟ್ರೇಷನ್ ಬಹಳ ಹೆಚ್ಚಾಗಿ ಆಗುತ್ತಾ ಇರುವುದರಿಂದ ಇನ್ನೂ ಹೆಚ್ಚು ಸಬ್ ರಿಜಿಸ್ಟ್ರಾರ್‌ರವರ ಆಫೀಸುಗಳನ್ನು ತೆರೆಯುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಎಲ್ಲೆಲ್ಲಿ ಹೆಚ್ಚಿನ ಅವಶ್ಯಕತೆ ಇದೆ ಎಂಬ ಅಂಕಿಅಂಶ ತೆಗೆದುಕೊಂಡು ವರ್ಷೇ ವರ್ಷೇ ಒಂದೆರಡು ಆಫೀಸುಗಳನ್ನು ತೆರೆಯುತ್ತಾ ಇರುತ್ತೇವೆ. ಆ ರೀತಿ ಧಾರವಾಡ ಜಿಲ್ಲೆಯಲ್ಲೂ ಅವಶ್ಯಕತೆ ಇದ್ದರೆ ಅದನ್ನು ಯೋಚನೆ ಮಾಡುತ್ತೇವೆ.

ಶ್ರೀ ಸಿ. ಎಸ್. ಹುಲ್ಕೋಟಿ.—ಗದಗ್ ಸಬ್ ರಿಜಿಸ್ಟ್ರಾರ್ಸ್ ಆಫೀಸಿನಲ್ಲಿ 3 ಮಂದಿ ಕ್ಲಾರ್ಕ್ಸ್ ಇದ್ದವರಲ್ಲಿ ಒಬ್ಬರನ್ನು ತೆಗೆದುಬಿಟ್ಟಿದ್ದೀರಿ ಇದರಿಂದ ಸರ್ಟಿಫೈಡ್ ಕಾಪೀಸ್ ಸಿಕ್ಕುವುದು ನಿಧಾನ ವಾಗುತ್ತಾ ಇದೆ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ನೋಡುತ್ತೇನೆ, ಆ ರೀತಿ ಗದಗ್‌ನಲ್ಲಿ ಇದ್ದರೆ ಸಂಬಂಧಪಟ್ಟ ಅಧಿಕಾರಿಗಳಿಗೆ ಹೇಳುತ್ತೇನೆ ಅಲ್ಲಿಗೆ ಸಾಕಾದಷ್ಟು ಸಿಬ್ಬಂದಿ ಕೊಡಿ ಎಂದು ತಿಳಿಸುತ್ತೇನೆ.

ಶ್ರೀ ಸಿ. ಎಸ್. ಹುಲ್ಕೋಟಿ.—ಹುಬ್ಬಳ್ಳಿಯಲ್ಲೂ ಅದೇ ರೀತಿ ಇದೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ !

ಶ್ರೀ ಎಂ. ವಿ. ಕೃಷ್ಣಪ್ಪ.—ತಾವು ಹೇಳುವುದು ಖರೇ ಆದರಿ, ನಾನು ಹೇಳುವುದೂ ಕೂಡ ಖರೋಬರಿ ಅವೆ. (ನಗು)

ಶ್ರೀ ಎಚ್. ಆರ್. ಕೇಶವಮೂರ್ತಿ.—ತಾವು ಹೊಸದಾಗಿ ಕ್ಲಾರ್ಕ್‌ನ ನೇಮಕ ಮಾಡುವುದಕ್ಕೆ ಮೊದಲು ಈಗಿರತಕ್ಕವರಿಗೇ ಓವರ್‌ಟೈಂ ಅಲೋಯನ್ಸ್ ಕೊಟ್ಟು ರಿಜಿಸ್ಟರ್ ಮಾಡಿದ ಪ್ರತಿ ಕಾಗದವನ್ನೂ ಕಾಪಿ ಮಾಡಿಸಿಕೊಡತಕ್ಕ ಒಂದು ಇಂಟರಿಮ್ ಅರೇಂಜ್‌ಮೆಂಟ್‌ನ್ನು ಏಕೆ ಮಾಡ ಬಾರದು ?

ಶ್ರೀ ಎಂ. ವಿ. ಕೃಷ್ಣಪ್ಪ.—ಅದು ಬಹಳ ಒಳ್ಳೆಯ ಸೂಚನೆ ಇದೆ, ಬಹುಶಃ ಈಗಾಗಲೇ ಜಾರಿಯಲ್ಲಿರಬಹುದು ಇಲ್ಲವೇ ಇದ್ದರೆ ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಸಿ. ಎಸ್. ಹುಲ್ಕೋಟಿ.—ರ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕ್‌ನವರು ಎನ್‌ಕಂಬರೆನ್ಸ್ ಸರ್ಟಿಫಿಕೇಟ್ ಕೊಡಬೇಕೆಂದು ಸಬ್‌ರಿಜಿಸ್ಟ್ರಾರ್ ಆಫೀಸಿಗೆ ಸರ್ಕ್ಯುಲರ್ ಕಳುಹಿಸಿದ್ದಾರೆ ಅದರೂ ಸಹಿತ ಒಂದೆರಡು ತಿಂಗಳುಗಳಾದರೂ ಸರ್ಟಿಫಿಕೇಟ್ ಕೊಡುವುದಿಲ್ಲ ಇದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅದಕ್ಕೆ ಒಂದು ಕಾರಣ ಇದೆ. ಸರ್ಕಾರದವರು ಕೊಡುತ್ತಾ ಇರತಕ್ಕ ರೋನ್ಸ್ ಬಹಳ ಜಾಸ್ತಿಯಾಗಿದೆ, ಭೂಮಿ ಕೊಂಡುಕೊಳ್ಳುವುದಕ್ಕೆ, ಬಾವಿ ತೆಗೆಯುವುದಕ್ಕೆ

ಈ ರೀತಿ ಎಲ್ಲಾ ಲೋನುಗಳನ್ನು ಕೊಡುತ್ತಾ ಇದ್ದಾರೆ. ಇದಕ್ಕೆಲ್ಲಾ ಪ್ರತಿಯೊಂದು ಅಪ್ಲಿಕೇಷನ್‌ಗೂ ಎನ್‌ಕಂಬರೆನ್ಸ್ ಸರ್ಟಿಫಿಕೇಟ್‌ನ್ನು ಕೊಡಬೇಕಾಗುತ್ತದೆ. ಆದ್ದರಿಂದ ಬಹಳ ನಿಧಾನವಾಗುತ್ತಾ ಇದೆ. ಸಿಬ್ಬಂದಿ ಸಾಕಾದಷ್ಟು ಕೊಡದೇ ಇದ್ದರೆ ತೊಂದರೆಯಾಗುತ್ತದೆ, ಈಗ ಇದನ್ನು ಪರಿಶೀಲನೆ ಮಾಡಿ ಸಾಕಾದಷ್ಟು ಸಿಬ್ಬಂದಿ ಕೊಡಲು ಪ್ರಯತ್ನ ಮಾಡುತ್ತಾ ಇದ್ದೇವೆ.

Sri GANJI VEERAPPA.—Are the Government aware that specially this time when agriculture loans are issued the delay in issuing copies of the documents is causing a great hardship to ryots and for the last one year in Harihar copies are not given? Are the Government aware that several requests were made in this behalf?

Sri M. V. KRISHNAPPA.—I accept there is delay and due to delay a lot of inconvenience is caused. But I assure the House that we will take action and immediately do something and try to give enough staff.

ಶ್ರೀ ಸಿ. ಎಸ್. ಹುಲ್ಕೋಟಿ.—ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕಿನವರು ಸಿಂಪಲ್ ಮಾರ್ಟ್‌ಗೇಜಿಗೆ ಸರ್ಟಿಫೈಡ್ ಕಾಪಿಯ ಅವಶ್ಯಕತೆಯಿಲ್ಲ, ರಿಜಿಷ್ಟ್ರಾರ್ ಅವರ ಕಛೇರಿಯಲ್ಲಿ ಇರತಕ್ಕ ರಿಜಿಷ್ಟರಲ್ಲಿ ನಮೂದಾಗಿರತಕ್ಕ ರಿಜಿಸ್ಟರ್ಡ್ ಬರವಣಿಗೆಯ ದಾಖಲೆ ಸಾಕೆಂದು ಹೇಳಿದ್ದರೂ ಅದನ್ನು ರಿಜಿಷ್ಟ್ರಾರರ ಆಫೀಸಿನಲ್ಲಿ ರಿಜಿಷ್ಟರಿಗೆ ನಮೂದು ಮಾಡದೆ ಇರುವುದರಿಂದ ತಲಾಟಿಯವರಿಗೆ ಸರ್ಕಾಲಕ್ಕೆ ದಾಖಲೆ ಸಿಗುತ್ತಿಲ್ಲ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಎಂ. ವಿ. ಕೃಷ್ಣಪ್ಪ.—ತಾವೇ ಅನೇಕ ಬೇಳೆ ಅದನ್ನು ತಿಳಿಸಿದ್ದೀರಿ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಹಾಲ ದೇಶದಲ್ಲಿ ಕ್ಷಾಮ ಪರಿಸ್ಥಿತಿ ಇರುವುದರಿಂದ ಅನೇಕರು ಹಣ ಪಡೆಯುವ ಉದ್ದೇಶದಿಂದ ಸರ್ಟಿಫೈಡ್ ಕಾಪಿಗಳನ್ನು ಕೇಳುತ್ತಿರುವುದರಿಂದ ಅವರಿಗೆ ಅವು ದೊರೆಯ ದೆ ಬಹಳ ತೊಂದರೆಯಾಗಿರತಕ್ಕದ್ದು ತಮ್ಮ ಗಮನಕ್ಕೆ ಬಂದಿದೆಯೆ?

Sri M. V. KRISHNAPPA.—There seems to be lot of grievance. Certainly we will enquire and see that something is done.

ಶ್ರೀ ಎಸ್. ಸೌಧಾಗರ್.—ಅಥಣಿಯಲ್ಲೂ ಸಹಾ ಸರ್ಟಿಫಿಕೇಟುಗಳನ್ನು ಕೇಳಿದರೆ ಈಗ ಸೌಡಿಲ್ಲ, ಬಹಳ ಕೆಲಸವಿದೆ ಎಂಬುದಾಗಿ ಹೇಳುತ್ತಿದ್ದಾರೆ. ಅದನ್ನು ತಪ್ಪಿಸಲು ಸರ್ಕಾರದವರು ಏನು ಕ್ರಮ ಕೈಕೊಂಡಿದ್ದಾರೆ?

ಶ್ರೀ ಎಂ. ವಿ. ಕೃಷ್ಣಪ್ಪ.—ಈಗ ಭೂಸುಧಾರಣೆ ಕಾನೂನು ಬೇರೆ ಜಾರಿಗೆ ಬಂದಿದೆ. ಈ ದಿವಸ ಯಾರಾದರೊಬ್ಬ ವ್ಯಕ್ತಿ ತನ್ನ ಜಮೀನಿನ ಪೈಕಿ ಯಾವುದನ್ನಾದರೂ ಮಾರಾಟ ಮಾಡ ಬೇಕಾಗಿದ್ದರೆ ಅತನು ಅವನಿಗಿರತಕ್ಕ ಎಲ್ಲಾ ಜಮೀನುಗಳ ನಂಬರನ್ನೂ ಡಿಕ್ಲರೇಷನ್ ಫಾರಂನಲ್ಲಿ ನಮೂದು ಮಾಡಬೇಕು. ಅದಕ್ಕೆ ಎನ್‌ಕಂಬ್ರೆನ್ಸ್ ಸರ್ಟಿಫಿಕೇಟನ್ನು ಕೊಡಬೇಕು. ಈ ನಾನಾ ಕಾರಣಗಳಿಂದ ಕೆಲಸ ಸ್ವಲ್ಪ ನಿಧಾನವಾಗಿದೆ. ಆದರೆ ಈ ಬದಲಾವಣೆಯಿಂದ ಈಗ ಸರ್ಕಾರಕ್ಕೆ ಹೆಚ್ಚಿನ ವರಮಾನ ಬರುತ್ತದೆ. ಆದ್ದರಿಂದ ಬೇಗ ಹೆಚ್ಚಿಗೆ ಸಿಬ್ಬಂದಿಯನ್ನು ನೇಮಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ತಮ್ಮ ಭರವಸೆಯಲ್ಲಿ ನಂಬಿಕೆ ಇಲ್ಲದಿರುವುದರಿಂದ ಅಲ್ಲವೇ ಈಗ ಒಂದೇ ಸಮನಾಗಿ ಇಷ್ಟೊಂದು ಉಪಪ್ರಶ್ನೆಗಳ ಸುರಿಮಳೆ ಬೀಳುತ್ತಿರುವುದು?

ಶ್ರೀ ಎಂ. ವಿ. ಕೃಷ್ಣಪ್ಪ.—ಬೇಗ ಕ್ರಮವನ್ನು ಕೈಗೊಳ್ಳಲಾಗುತ್ತದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈಗತಾನೆ ಮಂತ್ರಿಗಳು ವಿಧೇಶದಿಂದ ಬರಬೇಕಾಗಿದ್ದ ಕಾಗದ ಬಾರದೆ ಸ್ವಲ್ಪ ನಿಧಾನವಾಯಿತು ಎಂದು ಹೇಳಿದರು. ಆದರೆ ಅರ್ಜಿಗಳಿಗೆ ಹಾಕತಕ್ಕ ಸಣ್ಣ ಡಿನಾಮಿನೇಷನ್ನಿನ ಅಂದರೆ ಎರಡಾಣೆ, ನಾಲ್ಕಾಣೆ ಸ್ಟ್ಯಾಂಪುಗಳು ಸಹಾ ಸಿಕ್ಕದೆ ನಾವು ಮಂತ್ರಿಗಳಿಗೆ ಕೊಡತಕ್ಕ ಅರ್ಜಿಗಳಿಗೆ ನಾಲ್ಕು ರೂಪಾಯಿ, ಎರಡು ರೂಪಾಯಿ ಸ್ಟ್ಯಾಂಪನ್ನು ಹಚ್ಚಬೇಕಾದ ಪ್ರಸಂಗ ಬಂದಿದೆ, ಸ್ಟ್ಯಾಂಪನ್ನು ಒದಗಿಸುವುದಕ್ಕೆ ಬಂದಿರತಕ್ಕ ಕಷ್ಟವೇನು?

ಶ್ರೀ ಎಂ. ವಿ. ಕೃಷ್ಣಪ್ಪ.—ಈಗ ಆ ತೊಂದರೆಗಳೆಲ್ಲಾ ಬಹಳಮಟ್ಟಿಗೆ ನಿವಾರಣೆ ಆಗಿವೆ. ಅವುಗಳನ್ನು ಸರ್ಕಾಲಕ್ಕೆ ಸಾಕಷ್ಟು ಪ್ರಮಾಣದಲ್ಲಿ ಒದಗಿಸಲಾಗುತ್ತದೆ.

ಶ್ರೀ ಸಿ. ಎಸ್. ಹುಲ್ಕೋಟಿ.—ಫೋಟೋಜಿಂಕ್ ಪದ್ಧತಿಯ ಅಮಲು ಬಜಾವಣೆಯನ್ನು ಯಾವಾಗ ಮಾಡುತ್ತೀರಿ?

ಶ್ರೀ ಎಂ. ವಿ. ಕೃಷ್ಣಪ್ಪ.—ನಾವು ಈಗಾಗಲೇ ಫೋಟೋಜಿಂಕ್ ಸಿನ್ಪಂ ಅನ್ನು ಬೆಂಗಳೂರಿನಲ್ಲಿ ಜಾರಿಗೆ ತರಬೇಕೆಂದಿದ್ದೇವೆ. ಆದರೆ ಇತ್ತೀಚೆಗೆ ಅದಕ್ಕಿಂತಲೂ ಫೋಟೋ ಫಿಲಂ ಸಿನ್ಪಂ ಬಹಳ ಸುಲಭ ಎಂದು ಕೆಲವರು ಹೇಳುತ್ತಿದ್ದಾರೆ. ಈಗ ಫೋಟೋ ಜಿಂಕ್ ಸಿನ್ಪಂ ಅನ್ನು ಮೊದಲು ಜಾರಿಗೆ ತರಬೇಕೆಂದಿದ್ದೇವೆ.

ಶ್ರೀ ಎಸ್. ಗೋಪಾಲಗೌಡ.—ಈ ಹಿಂದೆ ಈ ಇರಾಖೆಯಲ್ಲಿ ಕೆಲಸ ಬಹಳ ನಿಧಾನ ಆಗುತ್ತಿದೆ ಎಂದು ಹೇಳಿ ಅದಕ್ಕೊಬ್ಬ ಕಮಿಷನರ್ ಆಫ್ ರಿಜಿಸ್ಟ್ರೇಷನ್ ಎಂಬುದಾಗಿ ನೇಮಕ ಮಾಡಿದ್ದಕ್ಕೇನು ಪ್ರಯೋಜನವಾಯಿತು ?

ಶ್ರೀ ಎಂ. ವಿ. ಕೃಷ್ಣಪ್ಪ.—ಆ ಹುದ್ದೆ ಬಹಳ ಪೂರ್ವದಿಂದಲೂ ಇದೆ, ಅದೇನೂ ಹೊಸದಲ್ಲ. ಆದರೆ ಈ ಇಲಾಖೆಯಲ್ಲಿ ಆಗತಕ್ಕ ಕೆಲಸವನ್ನು ತ್ವರಿತಗೊಳಿಸಲು ಇದನ್ನು ರೀಆರ್ಗನೈಜ್ ಮಾಡಲಾಯಿತು. ಅದರ ಪರಿಣಾಮವಾಗಿ ಈಗ ಜಿಲ್ಲೆಗೊಬ್ಬ ಡಿಸ್ಟ್ರಿಕ್ಟ್ ರಿಜಿಸ್ಟ್ರಾರರು ಇರುತ್ತಾರೆ. ಅವರು ಅಲ್ಲಿಯ ಕೆಲಸವನ್ನು ಆಗಿಂದಾಗ್ಗೆ ಚೆಕ್‌ಮಾಡಿ ನಿಧಾನವಾಗುವುದಕ್ಕೆ ಅವಕಾಶವಿಲ್ಲದಂತೆ ನೋಡಿಕೊಳ್ಳುತ್ತಾರೆ ಅಷ್ಟೇ ಅಲ್ಲದೆ ಇಲ್ಲಿಯತನಕ ಕೆಲಸಕ್ಕೆ ಪ್ರಾರಂಭದಲ್ಲಿ ಸಬ್‌ರಿಜಿಸ್ಟ್ರಾರ್‌ರಾಗಿ ಸೇರಿದರೆ ಆತನು ಸಬ್‌ರಿಜಿಸ್ಟ್ರಾರಾಗೇ ನಿವೃತ್ತಿಯಾಗಬೇಕಾಗಿತ್ತು. ಆಗ ಆತನಿಗೆ ಕೆಲಸದಲ್ಲಿ ಉತ್ತೇಜನವಿರಲಿಲ್ಲ. ಅದನ್ನು ತಪ್ಪಿಸಲು ಈಗ ಅವರ ಹುದ್ದೆಯಿಂದ ಮುಂದಕ್ಕೆ ಅವರಿಗೆ ಭಡ್ತಿ ಕೊಡಲು ' ಕ್ಲಾಸ್ ಒನ್ ' ಹುದ್ದೆಗಳನ್ನು ನಿರ್ಮಿಸಲಾಗಿದೆ. ಅದರಿಂದ ಅವರು ಮುಂದೆ ಬಹಳ ಚುರುಕಾಗಿ ಕೆಲಸ ಮಾಡುತ್ತಾರೆಂದು ಹೇಳುತ್ತೇನೆ.

ಶ್ರೀ ಸಂಜೀವನಾಥ ಐಕಳ.—ನಮ್ಮ ಪ್ರದೇಶ ಹಿಂದೆ ಮದ್ರಾಸ್ ಪ್ರಾಂತ್ಯದಲ್ಲಿದ್ದಾಗ ಪ್ಲೆನಾನ್‌ಷಿಯಲ್ ಇಯರ್ ಪ್ರಾರಂಭವಾಗುತ್ತಿದ್ದಹಾಗೆ ಈ ಅಧಿಕಾರಿಗಳಿಗೇನೇ ಬೇಕಾದ ಪೇಪರು ಮತ್ತು ಶಾಯಿ ಇತ್ಯಾದಿಗಳನ್ನು ಕೊಳ್ಳುವುದಕ್ಕೆ ಅವಕಾಶವಿತ್ತು. ಈಗ ಆ ಪದ್ಧತಿಯನ್ನು ಏಕೆ ಬದಲಾಯಿಸಲಾಯಿತು ?

ಶ್ರೀ ಎಂ. ವಿ. ಕೃಷ್ಣಪ್ಪ.—ಅದರಲ್ಲಿ ಅನೇಕ ತರಹೆಯ ದೂರುಗಳು ಬಂದವು. ಆದಕಾರಣ ಅದನ್ನು ತಪ್ಪಿಸಿ ಈಗ ಏಕ ರೀತಿಯಾಗಿ ಎಲ್ಲವನ್ನೂ ಎಸ್.ಪಿ.ಸಿ. ಇಂದಲೇ ಸರಬರಾಯಿ ಮಾಡಲಾಗುತ್ತಿದೆ.

Distribution of Lands to Displaced Ryots.

*Q.—565. Sri S. P. PHAYADE (Ankola).—

Will the Minister for Revenue be pleased to state :—

(*a*) the extent of land reserved for distribution to the displaced ryots of Sharavathi Valley Project (Talukwise details may be furnished);

(*b*) the extent of land distributed to the displaced ryots of Sharavathi Valley Project so far (Taluk-wise details may be furnished);

(*c*) whether the lands left out after distribution and not demanded by the ryots there would be distributed to the other needy and landless ryots;

(*d*) the number of applications received for such lands from the landless and needy ryots ?

A.—Sri M. V. KRISHNAPPA (Minister for Revenue).—

	Name of the Taluk		*Extent of Land*
(*a*)	Shimoga	...	1,916-20
	Bhadravathi	...	2,885-16
	Thirthahalli	...	141-13
	Sagar	...	15,661-14